Reg No. B G 155 2-7-1969

52 nd Year of Publication

SATYAVADI Daily, MYSORE 4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೇವಚ್ಚ ಸೇರಿ ವರ್ಷಕ್ಕೆ ರೂ. 10-0
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಪಶ್ಚಿಮ ಬಂಗಾಳದಲ್ಲಿ ಅನಾಯಕತ್ವ

ಸಮ್ಮೇಳನ ಯಶಸ್ಸಿಗೆ ಕರೆ

ಮೈಸೂರು ರಾಜ್ಯದ ಕುರುಬರ ಉನ್ನತಿ ನೇತಾರರ ಮೊದಲನೆ ಸಮ್ಮೇಳನ ಈ ತಿಂಗಳು 5-6 ರಂದು ಸೇರುವುದು, ಸರ್ವರೂ ನೆರವು ನೀಡಬೇಕು ಎಂದು ಸ್ವಾಗತಸಮಿತಿ ಅಧ್ಯಕ್ಷ ಶ್ರೀ ಡಿ. ಲಿಂಗಯ್ಯನವರು ಪತ್ರಿಕೆಯವರಿಗೆ ತಿಳಿಸಿದರು. ಸಮ್ಮೇಳನಕ್ಕೆ 2000 ಪ್ರತಿನಿಧಿಗಳು ಬರುವರು.

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶಿನ್ಯಾ ವರರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ|| ಎಂ.ಸಿ. ಮೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಗೊ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವದೆಂದು ಕೃತಜ್ಞತಾಪೂರ್ವಕವಂದಿಸುತ್ತೇವೆ.

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ಫೇರಾವೋ ಪ್ರಕರಣಗಳು

ತ್ರಿವೇಂಡ್ರಂ— ನಿನ್ನೆ ಎಲೆಕ್ಟ್ರಿಸಿಟಿ ಬೋರ್ಡಿನ ಕಚೇರಿಯ ಎಂಜನೀಯರರ, ಅಧ್ಯಕ್ಷರ, ಒಬ್ಬ ಕಡ್ಡಡದ ಫೇರಾವೋ ನಡೆಯಿತು.

ಮುಖ್ಯ ಮಂತ್ರಿಗಳು

ಬೆಂಗಳೂರು— ಮೈಸೂರಿನಲ್ಲಿ ಮಾನಸ ಗಂಗೋತ್ರಿಯಲ್ಲಿ ಕನ್ನಡ ನ್ಯಾಸಂಗ ಸಂಸ್ಥೆಯನ್ನೂ ಮೈಸೂರು ಕುರುಬರ ಸಮ್ಮೇಳನವನ್ನೂ ತಾ|| 5 ರಂದು ಉದ್ಘಾಟಿಸುವರು

ಮಾವೋ ಪುರಾಣ

ಮೈಸೂರಿನ ರಾಮಸ್ವಾಮಿ ಸರ್ಕಲ್ಲಿನ ಹತ್ತಿರ ಅಂಟಿಸಿದ್ದ ಮಾವೋ ಭಿತ್ತಿಪತ್ರವನ್ನು ಪೋಲೀಸರು ತೆಗೆದುಹಾಕಿದರು – ನಜರಬಾದಿನಲ್ಲಿ ಒಂದು ಮನೆಯಿಂದ ಮಾವೋ ಸಂಬಂಧದ ಕರಿಹೊತ್ತಿಗೆಗಳನ್ನು ಪೋಲೀಸರು ವಶಪಡಿಸಿಕೊಂಡರು.

ತಿದ್ದುಪಡಿ ಅಗತ್ಯ

ಭೂಸುಧಾರಣಾ ಶಾಸನಕ್ಕೆ ತಿದ್ದುಪಡಿ ಅಗತ್ಯ. ಈ ಶಾಸನದಿಂದ ಸಣ್ಣ ಹಿಡುವಳಿದಾರರಿಗೆ ತುಂಬಾ ತೊಂದರೆಯಾಗಿದೆ, ಭೂಸುಧಾರಣಾ ಶಾಸನದಲ್ಲಿ ತಿದ್ದುಪಡಿ ಆಗಬೇಕಾಗಿರಬೇಕಾಗಿರುವುದನ್ನು ಈ ತಿಂಗಳು 20 ರಂದು ಸೇರುವ ರಾಜ್ಯಮಟ್ಟದ ಭೂಮಾಲೀಕರ ಸಮ್ಮೇಳನ ಪರಿಶೀಲಿಸುವದು ಎಂದು ಶ್ರೀಗಳಾದ ಆಗರಂ ರಂಗಯ್ಯ, ಬಿ ಎಸ್ ದತ್ತಾತ್ರಿ, ಭಾಸ್ಕರರಾವ್ ನಿನ್ನೆ ಸಂಜೆ ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದರು.

ಅನಾಯಕ ಪಾಳ್ಯ

ಕಲ್ಕತ್ತಾ— ಪಶ್ಚಿಮ ಬಂಗಾಳಾ ರಾಜ್ಯದಲ್ಲೆಲ್ಲಾ ಹೆಚ್ಚುಕಡಮೆ ಅನಾಯಕತ್ವ ಪ್ರಸರಿಸಿದೆ ಎಂದು ತನ್ನ ಸದಸ್ಯರು ತಿಳಿಸಿದ್ದಕ್ಕೆ ಆಲ್ಲಿಯ ಕಾಂಗ್ರೆಸ್ ಪಾರ್ಲಿಮೆಂಟರಿ ಪಾರ್ಟಿ ಬೆದರಿಕೆ ವ್ಯಕ್ತಪಡಿಸಿದೆ.

ಚಿನ್ನದ ಹತೋಟಿ

ನವದೆಹಲಿ— ಚಿನ್ನದ ಹತೋಟಿ ಆಜ್ಞೆಯ ತಿದ್ದುಪಡಿಯ ಸುಗ್ರೀವಾಜ್ಞೆಯನ್ನು ರಾಷ್ಟ್ರಪತಿ ಡಿ. ವಿ. ಗಿರಿ ಅವರು ಪ್ರಕಟಿಸಿದ್ದಾರೆ

ಸರಮಾಣು ಆಯುಧ

ಜಕರ್ತ— ಭಾರತಕ್ಕೆ ಪರಮಾಣು ಆಯುಧಗಳನ್ನು ತಯಾರಿಸುವ ಅಥವಾ ಹೊಂದುವ ಇಚ್ಛೆಯಿಲ್ಲವೆಂದು ಭಾರತ ಪ್ರಧಾನಿ ಇಂದಿರಾರವರು ಹೇಳಿದರು.

ವಜ್ರದ ಹರಾಜು

ಮದರಾಸು— ಜೂನ್ 25 ರಿಂದ 30 ರವರೆಗೆ ನಡೆದ ವಜ್ರಗಳ ಹರಾಜಿನಲ್ಲಿ 987.70 ಕ್ಯಾರೆಟ್ ಶ್ಲಿವಜ್ರಗಳಿಗೆ ರೂ 376101 ದೊರೆಯಿತು.

ವಿಮಾನ ಅಪಘಾತ

ನವದೆಹಲಿ— ಆಗ್ರಾ ಮತ್ತು ಜೋದ್ಪುರ ಹತ್ತಿರ ನಿನ್ನೆ ಆದ ಎರಡು ವಿಮಾನ ಅಪಘಾತದಲ್ಲಿ 18 ಮಂದಿ ವಿಮಾನದಳದವರೂ 8 ಮಂದಿ ನಾಗರೀಕರೂ ಸತ್ತರು.

ಭಾರತೀಯರ ಭೇಟಿ

ಜಕರ್ತ— ಹೋಟಲ್ ಇಂಡೋನೇಷಿಯಾದಲ್ಲಿ ನಡೆಸಲಾದ ಸತ್ಕಾರ ಸಮಾರಂಭದಲ್ಲಿ ಭಾರತೀಯ ಜನರನ್ನು ಪ್ರಧಾನಿ ಇಂದಿರಾರವರು ಭೇಟಿಮಾಡಿದರು : 2 ಸಾವಿರ ಭಾರತೀಯರೂ ಅವರ ಸಂಸಾರಗಳೂ ಬಂದಿದ್ದರು.

ಹಗ್ಗದ ದಾರಿ

ರಾಜಗಿರ್— ಬುದ್ಧದೇವನು ರಾಜಗಿರ್‌ನಲ್ಲಿದ್ದಾಗ ಆತನ ಧ್ಯಾನಸ್ಥಾನವಾಗಿರತ್ನಗಿರಿಗೆ 2200 ಅಡಿ ಉದ್ದದ ಹಗ್ಗದ ದಾರಿ ಹಾಕಲಾಗುತ್ತಿದ್ದು ಅಕ್ಟೋಬರಿನಲ್ಲಿ ಸಿದ್ಧವಾಗಲಿದೆ – ಇದಕ್ಕೆ ರೂ. 18.4 ಲಕ್ಷ ಖರ್ಚಾಗಿದ್ದು ಅದರಲ್ಲಿ 160 ಕುರ್ಚಿಗಳಿರುತ್ತವೆ – ಗಿರ್ ಬೆಟ್ಟದ ಪಾದದಿಂದ ಅದು ಪ್ರಾರಂಭವಾಗುವದು – ರತ್ನಗಿರಿ ಬೆಟ್ಟದ ಮೇಲೆ ಶಾಂತಿಸ್ತೂಪ ನಿರ್ಮಿಸಲಾಗುವುದು – ರತ್ನಗಿರಿ ಬೆಟ್ಟಕ್ಕೆ ಹತ್ತಲು 1 ಗಂಟೆ ಹಿಡಿಯುತ್ತಿದ್ದುದು ಈ ಹಗ್ಗದ ದಾರಿ ಮೂಲಕ 15 ನಿಮಿಷಗಳಲ್ಲಿ ತಲಪಬಹುದು.

ವಿಶ್ವಸಂಸ್ಥೆಗೆ ಸೇರುಲ್ಲ

ಬರ್ನ್— ಸ್ವಿಡ್ಜರ್ಲೆಂಡು ವಿಶ್ವಸಂಸ್ಥೆಗೆ ಸೇರಲು ಇನ್ನೂ ಸಿದ್ಧವಿಲ್ಲವೆಂದು ತಿಳಿಸಿದೆ.

ಮುದ್ರಣ ಶಾಲೆ

ಮೈಸೂರಿನಲ್ಲಿ ಮುದ್ರಣ ತಾಂತ್ರಿಕ ಪಾಠಶಾಲೆಯನ್ನು ಕೇಂದ್ರವು ಸ್ಥಾಪಿಸಲ್ಯೋಜಿಸಿದೆ. ಈ ಬಗ್ಗೆ ಚಾಮುಂಡಿ ಬೆಟ್ಟದ ಪಾದದಲ್ಲಿ ಸೂಕ್ತ ಸ್ಥಳ ನೋಡಲು ಕೇಂದ್ರವು ವಿಶ್ವವಿದ್ಯಾಲಯಕ್ಕೆ ತಿಳಿಸಿರುವದಾಗಿ ಗೊತ್ತಾಗಿದೆ.

ಜಪಾನಿನ ರಾಜವಂಶ

ಜಪಾನಿನ ಚಕ್ರವರ್ತಿ ಹಿರೋಹಿಟೋ ಜಪಾನಿನಲ್ಲಿ ಕ್ರಿ ಪೂ 660 ರಿಂದಿರುವ ರಾಜವಂಶದ 124 ನೇ ಚಕ್ರವರ್ತಿಯವರಾಗಿದ್ದಾರೆ – ವಿಶ್ವದಲ್ಲೇ ಅತ್ಯಂತ ಪುರಾತನ ರಾಜವಂಶವಿದು.

ಪ್ರಿನ್ಸ್ ಆಫ್ ವೇಲ್ಸ್

ವೇಲ್ಸಿನ ಕೆರ್ನಾರ್ವನ್‌ನಲ್ಲಿ ರಾಜಕುಮಾರ ಚಾರ್ಲ್ಸ್‌ನನ್ನು ಪ್ರಿನ್ಸ್ ಆಫ್ ವೇಲ್ಸ್ ಆಗಿ ಮತ್ತು ಸಿಂಹಾಸನಕ್ಕೆ ಉತ್ತರಾಧಿಕಾರಿಯಾಗಿ ಎಲಿಜಬೆತ್ ರಾಣಿಯವರು ನಿನ್ನೆ ಕಿರೀಟಧಾರಣಾ ಮಹೋತ್ಸವವನ್ನು ನೆರವೇರಿಸಿದರು.

ಗಿರಣಿ ಬಂದ್

ಹುಬ್ಬಳ್ಳಿ— ತೀರ ನಷ್ಟಕ್ಕಾಗಿ ಇಲ್ಲಿನ ಕರ್ನಾಟಕ ಸಹಕಾರಿ ಗೆರಣಿ ಮುಚ್ಚಲ್ಪಟ್ಟಿತು : ಅದರ ಕಾರ್ಮಿಕರು ತಮ್ಮ ಕಷ್ಟ ಪರಿಹಾರಕ್ಕಾಗಿ ಗಿರಣಿ ತೆರೆಸಲು ಸರಕಾರವನ್ನು ಒತ್ತಾಯಮಾಡಿದೆ ; ವಿಲ್ಲಿಗೆ 1959 ರಿಂದ ರೂ 65 ಲಕ್ಷ ನಷ್ಟವಾಗಿದೆಯೆಂದೂ, ಸರಕಾರ ರೂ 40 ಲಕ್ಷ ಬಂಡವಾಳ ಹಾಕಿದ್ದು, ಆಪೆಕ್ಸ್ ಬ್ಯಾಂಕಿಗೆ ರೂ 80 ಲಕ್ಷಕ್ಕೆ ಗ್ಯಾರಂಟಿ ಆಗಿದೆ.

ಮಲ್ಲಾಡು ಜಿಲ್ಲೆ

ಮದರಾಸು— ಕೇರಳದಲ್ಲಿ ಯೋಜಿಸಲಾಗಿರುವ ಮಲ್ಲಾಡು ಜಿಲ್ಲೆಯು ಇನ್ನು 2–3 ತಿಂಗಳಲ್ಲಿ ಸ್ಥಾಪಿಸಲಾಗುವದೆಂದು ಕೇರಳ ಮುಖ್ಯ ಮಂತ್ರಿ ನಂಬೂದರಿಪಾದರು ಹೇಳಿದರು – ಮಲ್ಲಾಪುರ ಸತ್ಯಾಗ್ರಹಿಗಳನ್ನು ರಾಜಕೀಯ ಖೈದಿಗಳಾಗಿ ಕಾಣಲು ಒಪ್ಪಿದರು.

ಸಂತಶ್ರೇಷ್ಠ ಮಾಣಿಕ್ಯ ವಾಚಕರ್

[' ಲೇಖನ ಕಾವೇರಿ ಯಿಂದ ']

[ಮುಂದುವರಿದುದು]

ಈ ಮಧ್ಯೆ ತನ್ನ ಭಕ್ತನ ಮೇಲೆ ಕೃಪೆತೋರಬೇಕೆಂದು ಬಗೆದ ಶಿವ ತಪಸ್ವಿಯ ರೂಪು ತಾಳಿ, ಪ್ರಥಮಗಣಗಳನ್ನೇ ಶಿಷ್ಯರನ್ನಾಗಿ ಮಾಡಿಕೊಂಡು, ತರುಪೆರುಂದುರೈ ಮುಳಿಯಿದ್ದ ಒಂದು ವಿಶಾಲ ಕುರುಂದು ವೃಕ್ಷದ ಕೆಳಗೆ ಕುಳಿತಿದ್ದ. ಮುಖ್ಯಮಾ ತ್ಯನು ಈ ದಾರಿಯ ಸುದ್ದಿ ಹಿಡಿದು ಬರುತ್ತ, ಮರದ ಕೆಳಗೆ ಕುಳಿತಿದ್ದ ಜ್ಞಾನಿಯನ್ನು ಕಂಡನು. ಭಕ್ತಿ ಉಕ್ಕಿ ರಥವಿಂದಿಳಿದು ಬಂದು ಸನ್ಯಾಸಿಯ ಮುಂದೆ ಅಡ್ಡ ಬಿದ್ದು ' ಸ್ವಾಮಿ, ನನ್ನನ್ನೂ ನಿನ್ನ ಶಿಷ್ಯನನ್ನಾಗಿ ಮಾಡಿಕೊಳ್ಳಿ : ಈ ಭವಬಂಧನದಿಂದ ಪಾರುಮಾಡಿ " ಎಂದು ಬೇಡಿಕೊಂಡನು.

ತನ್ನ ಭಕ್ತನ ಮನಸ್ಸು ಪಕ್ವವಾಗಿದೆಯೆಂದು ತಿಳಿದ ಶಿವ ಅವನಿಗೆ ಜ್ಞಾನೋಪದೇಶ ಮಾಡಿದ. ದೈವಾನುಗ್ರಹಕ್ಕೆ ಪಾತ್ರನಾದ ಭಕ್ತ ದೇವರನ್ನು ಮನವಾರೆ ಹೊಗಳಿ ಹಾಡಿದ. ಈ ಸ್ತುತಿಗೀತೆಗಳು ಮಾಣಿಕ್ಯದಂತೆ ಶುದ್ಧವೂ ಅಮೂಲ್ಯವೂ ಆಗಿದ್ದುದರಿಂದ ಶಿವ ಅವನನ್ನು ಮಾಣಿಕ್ಯವಾಚಕರ್ ಎಂದೇ ಕರೆದ. ತಿರುವಾದವೂರರ್ ಎಂಬುವ ಈತನಿಗೆ ತಂದೆತಾಯಿ ಇಟ್ಟ ಹೆಸರು. ಭಕ್ತಿಯಲ್ಲಿ ಮಿಂದು ನವೋತ್ಸಾಹದಿಂದ ತುಂಬಿತುಳುಕುತ್ತಿದ್ದ ವಾಚಕರು ಕುದುರೆ ಕೊಳ್ಳಲೆಂದು ದೊರೆ ಕೊಟ್ಟಿದ್ದ ಹಣವನ್ನೆಲ್ಲ ಸನ್ಯಾಸಿಗೆ ಗುರುದಕ್ಷಿಣೆಯಾಗಿ ಕೊಟ್ಟು ಕೈ ಮುಗಿದು ಕೃತಾರ್ಥನಾದೆನೆಂದುಕೊಂಡರು. ತಿರುಪೆರುಂದುರೆಯಲ್ಲಿದ್ದ ದೇವಾಲಯದ ಜೀರ್ಣೋದ್ಧಾರಕ್ಕೆ ಈ ಹಣ ವಿನಿಯೋಗವಾಯಿತು.

ಇತ್ತ ದೊರೆಗೆ ತನ್ನ ಮಂತ್ರಿ ಶೈವಸನ್ಯಾಸಿಯಾಗಿರುವನೆಂದೂ ರಾಜಕಾರಣವನ್ನು ಬಿಟ್ಟು ಭಕ್ತಿಪಥ ಹಿಡಿದಿರುವನೆಂದೂ ತಿಳಿಯಿತು. ಕೂಡಲೇ ಕುದುರೆಗಳನ್ನು ಕಳಿಸಿಕೊಡಬೇಕೆಂಬ ಅಣತಿಯೊಡನೆ ದೂತರನ್ನಟ್ಟಿದ. ಮಾಣಿಕ್ಯವಾಚಕರು ಈ ಸಂಗತಿಯನ್ನು ಅರಿಕೆಮಾಡಿದರು. ಶಿವನ ಅನುಜ್ಞೆಯಂತೆ ರಾಜಧಾನಿಗೆ ಹಿಂತಿರುಗಿ ಇನ್ನು ಕೆಲವು ದಿನಗಳಲ್ಲೇ ಕುದುರೆ ಬರುವದೆಂದು ದೊರೆಗೆ ಹೇಳಿದರು. ಗೊತ್ತಾದ ದಿನಕ್ಕೆ ಕುದುರೆಗಳು ಬಾರದಿದ್ದುದನ್ನು ಕಂಡು, ದೊರೆಯು ಕುಪಿತನಾಗಿ ಹಣವನ್ನು ಬೇಗ ತಂದು ಬೊಕ್ಕಸಕ್ಕೆ ಒಪ್ಪಿಸಬೇಕೆಂದು ಒತ್ತಾಯಮಾಡತೊಡಗಿದ.

ಅಷ್ಟು ಅಗಾಧ ಹಣವನ್ನು ತರಲು ಮಾಣಿಕ್ಯವಾಚಕರು ತರಲು ಸಾಧ್ಯವಾಗದಿದ್ದುದರಿಂದ ಅವರನ್ನು ಕಾರಾಗೃಹಕ್ಕೆ ಹಾಕಬೇಕೆಂದು ದೊರೆ ಆಜ್ಞೆ ಮಾಡಿದ.



Protect the Cow

SHAKTI SUDHA

A Superb Tonic

ವುಡ್‌ಲ್ಯಾಂಡ್ಸ್ ಜಯಸ್ಮದ 6 ನೇ ವಾರ

ಬಹಳ ದಿನಗಳಿಂದಲೂ ಎದುರುನೋಡುತ್ತಿದ್ದ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ

.... ನೋಡಲು ತಪ್ಪಬೇಡಿ ....

ದುನಿಯಾ Duniya

ನಟವರ್ಗ — ದೇವಾನಂದ್, ವೈಜಯಂತಿಮಾಲಾ, ಜಾನಿವಾಕರ್, ಬಾಲರಾಜ್ ಸಹಾನಿ

ತಾ|| 23-5-69 ರಿಂದ ಪ್ರವೇಶದರಗಳನ್ನು ಕೆಳಗೆನಮೂದಿಸಿರುವಂತೆ ಬದಲಾಯಿಸಿದೆ

ಬಾಕ್ಸ್ ರೂ 2-90, ಬಾಲ್ಕನಿ ರೂ 2-05, ಕೆಳಗಡೆ ರೂ 1-20, 0-75

[ದಿನ 3 ಪ್ರದರ್ಶನಗಳು]

ಒಪೆರಾ — 27-6-69 ರಿಂದ

— ಸಕಲರೂ ನೋಡಿ ಆನಂದಿಸಬೇಕಾದ ಅಮೋಘ ಕನ್ನಡ ಚಿತ್ರ —

ಮಕ್ಕಳೇ ಮನೆಗೆ ಮಾಣಿಕ್ಯ

ನಟವರ್ಗ — ಉದಯಕುಮಾರ್, ಬಿ. ವಿ. ರಾಧಾ, ಆದವಾನಿ ಲಕ್ಷ್ಮೀದೇವಿ, ಶೈಲಶ್ರೀ, ಜಯ, ದಿನೇಶ್, ನಾಸ್ಪರ್, ಕೃಷ್ಣಕುಮಾರ್, ಬೇಬಿ ಪ್ರತಾಂತ

ದಿನ 3 ಆಟಗಳು

Golden Jubilee of 'Satyavadi'

The golden jubilee of the 'Satyavadi' is to be celebrat very soon

The President, the Prime Minister, H.H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah Sri Madhav Shenoi, Sri Opera Talkies, Padmabhushana Dr. M.C. Modi, Dr. R. S. Nanjunda Swamy (Glasgow) Sri Ananthanarasimha Iyengar (Honganur) have generously extended donations and best wishes.

It iswelknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

Help The Gorakshana

Quality Printing — Neat Binding

Lakshminarasimha Press

Sivarampet, Mysore

Edited, Printed & Published by Dharmaprachara Nirata M. S. Krishna Rao (Proprietor) at the Satyavadi Press Chamarajapuram, Mysore 4